## ಇಂಟರ್ವಲ್

ಜೂನ್ 20ರ ಸಂಚಿಕೆಯ ಮುಖಪುಟ ಲೇಖನ ‘ಇಂಟರ್ವಲ್’ (ರಘುನಾಥ ಚ.ಹ, ಪದ್ಮನಾಭ ಭಟ್) ‘ಸಿಂಹಾವಲೋಕನ’ ಕ್ರಮ ಸೊಗಸಾಗಿದೆ. ವಿಚಾರವಿಮರ್ಶೆ, ವಿಶ್ಲೇಷಣೆಯ ಸಂಗತಿಗಳಿಂದ ಸಮೃದ್ಧವಾಗಿದೆ.

–ಮೋಹನ ರು. ಹಣಗಿ, ಅಮೀನಗಡ




## ಮುದ್ದಣ ಕಾವ್ಯ ಪ್ರಶಸ್ತಿಗೆ ಆಹ್ವಾನ

ಕಳೆದ ನಲುವತ್ತು ವರ್ಷಗಳಿಂದ ಕಾಂತಾವರ ಕನ್ನಡಸಂಘವು ಮುದ್ದಣ ಕಾವ್ಯ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. 2019ರ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗಾಗಿ ಮುದ್ರಣಕ್ಕೆ ಸಿದ್ಧವಾಗಿರುವ ಕವನಸಂಗ್ರಹಗಳ ಹಸ್ತಪ್ರತಿಗಳನ್ನು ಸ್ವಾಗತಿಸುತ್ತಿದೆ. ಪ್ರಶಸ್ತಿಯು ₹ 10,000 ನಗದು ಮತ್ತು ಪ್ರಶಸ್ತಿಪತ್ರವನ್ನು ಒಳಗೊಂಡಿದೆ. ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು.

ವಿಳಾಸ: ಪ್ರಧಾನ ಕಾರ್ಯದರ್ಶಿ, ಕಾಂತಾವರ ಕನ್ನಡಸಂಘ (ರಿ), ಅಂಚೆ: ಕಾಂತಾವರ – 574129, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ ಅಥವಾ kannadasanghakanthavara@gmail.com ಈ ಮಿಂಚಂಚೆಯಿಂದಲೂ ಮಾಹಿತಿಗಳನ್ನು ಪಡೆಯಬಹುದು. ದೂರವಾಣಿ ಸಂಖ್ಯೆ: 9008978366 ವಿವರಗಳನ್ನು ಪಡೆಯುವ ಕೊನೆಯ ದಿನಾಂಕ ಜುಲೈ 30. ಹಸ್ತಪ್ರತಿ ಸ್ವೀಕಾರದ ಕೊನೆಯ ದಿನಾಂಕ ಆಗಸ್ಟ್ 30.

## ಕಾರ್ನಾಡರ ಸಿನಿಮಾಯಾನ

ಜೂನ್ 27ರ ಸಂಚಿಕೆಯಲ್ಲಿ ಮಹತಿ ಬರೆದಿರುವ ಗಿರೀಶ ಕಾರ್ನಾಡರ ಕುರಿತ ಲೇಖನ ‘ಆಡಾಡತ ಐದು ಚಿತ್ರ’ ಓದಿ ಖುಷಿಯಾಯ್ತು. ಭಾರತದ ಶ್ರೇಷ್ಠ ನಾಟಕಕಾರನ ವ್ಯಕ್ತಿತ್ವದ ಇನ್ನೊಂದು ಮಗ್ಗುಲನ್ನು ಪರಿಚಯಿಸಿತು. ಜೊತೆಗೆ ಹಳೆಯ ಸಿನಿಮಾಗಳ ಸ್ಟಿಲ್‌ಗಳು, ಅವುಗಳಲ್ಲಿನ ನಾಸಿರುದ್ದೀನ್ ಶಾ, ಅಮರೀಶ್ ಪುರಿ, ಲಂಕೇಶ್ ಅವರನ್ನೆಲ್ಲ ನೋಡಿ ಸಂತೋಷವಾಯ್ತು.

–ಧನಂಜಯ ಎಸ್. ಕೋಲಾರ




## ಅಮ್ಮ -ಮಗಳ ನಡುವಿನ ಅಂತರ

ಜಗತ್ತಿನಲ್ಲಿ ಎಲ್ಲರೂ ಕೆಟ್ಟವರಿಲ್ಲ, ನಾವು ನೋಡುವ ನೋಟದಲ್ಲಿದೆ ಎಂಬುದು ಸತ್ಯ. ಆದರೂ ಹೆಂಗಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಸುದ್ದಿಗಳನ್ನು ಪ್ರತಿದಿನ ದಿನಪತ್ರಿಕೆಗಳಲ್ಲಿ ಓದುವಾಗ ನಮ್ಮ ಸಮಾಜ ಸಂಪೂರ್ಣ ಸ್ವಸ್ಥವಾಗಿಯೇನೂ ಇಲ್ಲ ಎಂಬುದು ತಿಳಿಯುತ್ತದೆ. ಹಾಗಾಗಿ ಅಮ್ಮಂದಿರು ತಮ್ಮ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲೇಬೇಕಾಗುತ್ತದೆ. ಹೆಣ್ಣುಮಕ್ಕಳನ್ನು ಬೇಕಾಬಿಟ್ಟಿ ಬಿಡಲು ಸಾಧ್ಯವಿಲ್ಲ. ಕಾನೂನು ಪೊಲೀಸು ಇದ್ದರೂ ಕೂಡ ಹೆಣ್ಣು ಮಕ್ಕಳಿಗೆ ಸುರಕ್ಷತೆಯ ಆತಂಕ ಇದ್ದೇ ಇದೆ. ಮಕ್ಕಳು, ಪಾಲಕರ ಮಾತುಗಳಿಗೆ ಕಿವಿಕೊಟ್ಟರೆ ಅನಾಹುತಗಳು ಕಡಿಮೆಯಾಗುವುದಂತೂ ಸಹಜ. ಜೂನ್ 27ರ ಸಂಚಿಕೆಯ ‘ಬೆಳೆದ ಮಗಳು ಅಮ್ಮನ ದಿಗಿಲು’ (ಕೋಡಿಬೆಟ್ಟು ರಾಜಲಕ್ಷ್ಮಿ) ಲೇಖನ ವಾಸ್ತವತೆಯನ್ನು ಸಮರ್ಪಕವಾಗಿ ನಿರೂಪಿಸಿದೆ.

–ಪ.ಚಂದ್ರಕುಮಾರ ಗೌನಹಳ್ಳಿ

ಹದಿಹರೆಯ ಎನ್ನುವುದು ಸಹಜವಾಗಿ ಕಡಿವಾಣವನ್ನು ಧಿಕ್ಕರಿಸುವಂಥದ್ದು. ಹಾಗಾಗಿಯೇ ಹರೆಯಕ್ಕೆ ಬಂದಾಗ ಹಿರಿಯರನ್ನು, ಅವರ ಹಿತೋಪದೇಶಗಳನ್ನೂ ಧಿಕ್ಕರಿಸಲು ಶುರುಮಾಡುತ್ತಾರೆ. ಇಂದಿನ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಕಾಲಮಾನದಲ್ಲಿ ಮಕ್ಕಳು ಹರೆಯಕ್ಕೆ ಬರುವಷ್ಟರಲ್ಲಿ ಅವರ ಜಗತ್ತು ಪೂರ್ತಿಯಾಗಿಯೇ ಬೇರೆಯಾಗಿರುತ್ತದೆ. ಅದು ಬರಿಯ ಮನಸ್ಸಿಗೆ ಸಂಬಂಧಿಸಿದ್ದಲ್ಲ, ಬದಲಿಗೆ ಸುತ್ತಲಿನ ಸಮಾಜಕ್ಕೂ ಸಂಬಂಧಿಸಿದ್ದು. ಅದರ ಮೌಲ್ಯಗಳಿಗೂ ಸಂಬಂಧಿಸಿದ್ದು. ಹೀಗೆ ಮೌಲ್ಯಗಳ ವ್ಯಾಖ್ಯಾನ ಬದಲಾದಾಗ ಪೀಳಿಗೆಗಳ ನಡುವ ಘರ್ಷಣೆಯೂ ಬಂದೇ ಬರುತ್ತದೆ. ಅದರಲ್ಲಿಯೂ ಅಮ್ಮ–ಮಗಳ ನಡುವಿನ ಈ ಅಂತರ ಪ್ರತಿ ಪೀಳಿಗೆಯಲ್ಲಿಯೂ ಇರುವಂಥದ್ದೇ. ಅದರ ಸ್ವರೂಪಗಳು ಬದಲಾಗುತ್ತಿರುತ್ತವಷ್ಟೆ. ಈ ಅಂತರವನ್ನು ಮತ್ತು ಅದನ್ನು ಮೀರುವ ಪರಿಯನ್ನು ಜೂನ್ 27ರ ಸಂಚಿಕೆಯ ಮುಖಪುಟ ಲೇಖನ ‘ಬೆಳೆದ ಮಗಳು; ಅಮ್ಮನ ದಿಗಿಲು’ ತುಂಬ ಚೆನ್ನಾಗಿ ವಿವರಿಸಿದೆ.

–ವಿಜಯಲಕ್ಷ್ಮೀ ಕರವೀರಮಠ, ಧಾರವಾಡ

## ಉಪಯುಕ್ತ ತಂತ್ರಜ್ಞಾನ

ಜೂನ್ 27ರ ಸಂಚಿಕೆಯ ತಂತ್ರಜ್ಞಾನ ಪುಟದಲ್ಲಿ ಶಶಿಕುಮಾರ್ ಸಿ. ಅವರು ಬರೆದ ಬರಹ ಉಪಯುಕ್ತವಾಗಿದೆ. ಮೊಬೈಲ್ ಕಳೆದುಕೊಳ್ಳುವುದು ಈಗ ಸಾಮಾನ್ಯವಾದ ಸಂಗತಿ. ಮೊಬೈಲೇ ನಮ್ಮ ಖಾಸಗೀ ಬದುಕಿನ ಅವಿಭಾಜ್ಯ ಅಂಗವಾಗಿರುವಾಗ ಅದನ್ನು ಕಳೆದುಕೊಂಡಾಗ ದಿಗಿಲು ಬೀಳುವುದು ಸಹಜ. ಆದರೆ ತಂತ್ರಜ್ಞಾನದ ಮೂಲಕವೇ ಅದರಲ್ಲಿನ ಡೇಟಾ ಸೋರಿಕೆ ತಡೆಗಟ್ಟಲು ಸಾಧ್ಯ ಎಂಬ ವಿಷಯ ತಿಳಿದು ಅಚ್ಚರಿಯಾಯ್ತು. ಆದರೆ ಕಳ್ಳರೂ ಇಂಥದ್ದಕ್ಕೆಲ್ಲ ಮತ್ತೊಂದು ಕಳ್ಳದಾರಿ ಹುಡುಕಿಕೊಳ್ಳದೇ ಇರುತ್ತಾರೆಯೇ? ಅವರೂ ಈ ತಂತ್ರಜ್ಞಾನ ಪಾರಮ್ಯದ ಜಗತ್ತಿನಲ್ಲಿಯೇ ಇರುವವರಲ್ಲವೇ?

–ಅಶೋಕ ದೇವಾಡಿಗ, ಶಿವಮೊಗ್ಗ

## ಅತ್ಯಾಪ್ತ ಬರಹಗಳು

‘ಫಾದರ್ಸ್ ಡೇ’ ಪ್ರಯುಕ್ತ ಜೂನ್ 20ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಓದಿ ಮನದುಂಬಿ ಬಂತು. ಎಲ್ಲ ಬರಹಗಳೂ ಅತ್ಯಾಪ್ತವಾಗಿವೆ. ಕೆ.ವಿ. ರಾಜಲಕ್ಷ್ಮಿ ಅವರ ಕಥೆ ‘ನಿಮ್ಮದಲ್ಲದ್ದು’ ನವಿರಾಗಿ ನಿರೂಪಿತವಾಗಿದೆ. ಋಣಾನುಬಂಧವಿದ್ದರೆ ‘ನಮ್ಮದಲ್ಲದ್ದು’ ಅನಾಯಾಸವಾಗಿ ನಮ್ಮದಾಗುತ್ತದೆ ಎಂಬುದನ್ನು ಲೇಖಕಿ ಕಥೆಯಲ್ಲಿ ಚೆನ್ನಾಗಿ ನಿರೂಪಿಸಿದ್ದಾರೆ.

–ಸುಂದರ್ ಬೆಂಗಳೂರು, ಕಾಳಿಹುಂಡಿ ಶಿವಕುಮಾರ್ ಮೈಸೂರು

ಸೃಜನಾ ಕಾಯ್ಕಿಣಿ, ಮಾನ್ವಿತಾ ಕಾಮತ್, ಗಿರಿಜಾ ಸಿದ್ದಿ, ಟಿ.ಎಸ್. ಗೊರವರ, ಸುಮನ ನಾರಾಯಣ್ ಇವರೆಲ್ಲ ಅಪ್ಪಂದಿರ ಜೊತೆ ಕಳೆದ ಗಳಿಗೆಗಳನ್ನು ಬಿಚ್ಚಿಟ್ಟಿದ್ದಾರೆ. ತಂದೆ–ತಾಯಿ ನಮ್ಮ ಎರಡು ಕಣ್ಣುಗಳಿದ್ದ ಹಾಗೆ.

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in